# ದಾವಣಗೆರೆ ವಿಶ್ವವಿದ್ಯಾನಿಲಯ
# DAVANGERE UNIVERSITY

ಕುಲಸಚಿವ (ಪರೀಕ್ಷಾಂಗ) ರವರ ಕಚೇರಿ,
ಶಿವಗಂಗೋತ್ರಿ, ದಾವಣಗೆರೆ-577007.
ದೂರವಾಣಿ ಸಂಖ್ಯೆ: 08192-208420/208104.

Office of the Registrar (Evaluation)
Shivagangothri, Davangere -577007.
Phone No. 08192-208420/208104.

**Email:** convocation@davangereuniversity.ac.in / registrarevalutiondvg2@gmail.com

ಸಂಖ್ಯೆ:ದಾವಿವಿ:ಪವಿ:ಘಟಿ:-12: 3328 2024-25/ ದಿನಾಂಕ:18.01.2025

## -:: ಅಧಿಸೂಚನೆ ::-

ವಿಷಯ: 12ನೇ ವಾರ್ಷಿಕ ಘಟಿಕೋತ್ಸವದಲ್ಲಿ ಪದವಿ ಪ್ರಮಾಣ ಪತ್ರಗಳನ್ನು ಪಡೆಯಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುತ್ತಿರುವ ಬಗ್ಗೆ.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 24.12.2024

*****

ದಾವಣಗೆರೆ ವಿಶ್ವವಿದ್ಯಾನಿಲಯದ ಮುಂಬರುವ 12ನೇ ವಾರ್ಷಿಕ ಘಟಿಕೋತ್ಸವದಲ್ಲಿ ಪದವಿ ಪಡೆಯಲು **NEP/CBCS ಪಠ್ಯಕ್ರಮದ ಜನವರಿ/ಫೆಬ್ರವರಿ-2024, ಜುಲೈ/ಆಗಸ್ಟ್-2024, ಸೆಪ್ಟೆಂಬರ್/ಅಕ್ಟೋಬರ್-2024 ಮತ್ತು ಡಿಸೆಂಬರ್-2024**ರಲ್ಲಿ ನಡೆದ ವಿವಿಧ ಸ್ನಾತಕ/ಬಿ.ವಿ.ಎ/ಬಿ.ಇಡಿ.,/ಬಿ.ಪಿ.ಇಡಿ.,/ಸ್ನಾತಕೋತ್ತರ/ಪಿ.ಹೆಚ್.ಡಿ., ಪದವಿಗಳ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವ ಅರ್ಹ ಅಭ್ಯರ್ಥಿಗಳಿಗೆ **"ಪದವಿ ಮತ್ತು ರ್‍ಯಾಂಕ್ ಪ್ರಮಾಣ ಪತ್ರ ಮತ್ತು ಚಿನ್ನದ ಪದಕಗಳನ್ನು"** ಈ ಘಟಿಕೋತ್ಸವದಲ್ಲಿ ಪ್ರಧಾನ ಮಾಡಲಾಗುವುದು. ಈ ಮೇಲ್ಕಂಡ ವರ್ಷದಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಶುಲ್ಕ ಪಾವತಿಸಿ ಅರ್ಜಿ ಸಲ್ಲಿಸಬಹುದಾಗಿದೆ.

1. ಆಯಾ ಪದವಿಗಳಲ್ಲಿ ಪ್ರಥಮ ರ್‍ಯಾಂಕ್ ಪಡೆದವರಿಗೆ, ಚಿನ್ನದ ಪದಕ ಹಾಗೂ ಪದವಿ ಪ್ರಮಾಣ ಪತ್ರಗಳನ್ನು ಮತ್ತು ಪಿಹೆಚ್.ಡಿ., ಅಭ್ಯರ್ಥಿಗಳಿಗೆ ಘಟಿಕೋತ್ಸವ ಸಮಾರಂಭದ ವೇದಿಕೆಯ ಮೇಲೆ ಪದವಿ ಪ್ರಧಾನ ಮಾಡಲಾಗುವುದು.

2. 02 ರಿಂದ 10ನೇ ರ್‍ಯಾಂಕ್ ಪಡೆದ ಅಭ್ಯರ್ಥಿಗಳಿಗೆ ರ್‍ಯಾಂಕ್ ಪ್ರಮಾಣ ಪತ್ರ ಮತ್ತು ಪದವಿ ಪ್ರಮಾಣ ಪತ್ರಗಳನ್ನು ಹಾಗೂ ಇತರೆ ಎಲ್ಲಾ ಪದವಿಗಳ ಪದವೀಧರ ಪದವಿ ಪ್ರಮಾಣ ಪತ್ರಗಳನ್ನು ಘಟಿಕೋತ್ಸವದ ನಂತರ ಅವರು ಅಧ್ಯಯನ ಮಾಡಿದ ವಿಭಾಗ/ ಕಾಲೇಜುಗಳಿಂದ ಪಡೆದುಕೊಳ್ಳಬಹುದು.

**ಶುಲ್ಕದ ವಿವರಗಳು**

| ಕ್ರ ಸಂ. | ಪದವಿ | ಪೂರ್ಣಗೊಂಡ ವರ್ಷ | ಸಾಮಾನ್ಯ ವರ್ಗದ ಅಭ್ಯರ್ಥಿಗಳು (ರೂ.) | ಪ.ಜಾತಿ/ಪ.ಪಂಗಡ/ ಪ್ರವರ್ಗ-1 ಅಭ್ಯರ್ಥಿಗಳು (ರೂ.) |
|---|---|---|---|---|
| 1 | ಸ್ನಾತಕ ಪದವಿ | ಜನವರಿ/ಫೆಬ್ರವರಿ-2024<br>ಜುಲೈ/ಆಗಸ್ಟ್-2024 | 970-00 | 790-00 |
| 2 | ಬಿ.ಇಡಿ. ಪದವಿ | ಜನವರಿ-2024<br>ಡಿಸೆಂಬರ್-2024 | 970-00 | 790-00 |
| 3 | ಬಿಪಿ.ಇಡಿ ಪದವಿ | ಸೆಪ್ಟೆಂಬರ್-2024 | 970-00 | 790-00 |
| 4 | ಸ್ನಾತಕೋತ್ತರ ಪದವಿ | ಸೆಪ್ಟೆಂಬರ್/ಅಕ್ಟೋಬರ್-2024 | 1,490-00 | 935-00 |
| 5 | ಪಿಹೆಚ್.ಡಿ | 2024-25 | 2,810-00 | 2,465-00 |

**ಅಭ್ಯರ್ಥಿಗಳಿಗೆ ಸೂಚನೆಗಳು:**

1. 12ನೇ ವಾರ್ಷಿಕ ಘಟಿಕೋತ್ಸವ ನಡೆಯುವ ನಿಗದಿತ ದಿನಾಂಕ, ಸಮಯ ಮತ್ತು ಸ್ಥಳವನ್ನು ವಿಶ್ವವಿದ್ಯಾನಿಲಯದ ಜಾಲತಾಣ/ಪತ್ರಿಕೆ/ಮಾಧ್ಯಮಗಳಲ್ಲಿ/ಎಲ್ಲಾ ಕಾಲೇಜು/ಸ್ನಾತಕೋತ್ತರ ಕೇಂದ್ರ/ಘಟಕ ಕಾಲೇಜುಗಳಲ್ಲಿ ಪ್ರಕಟಿಸಲಾಗುವುದು.
2. ಅಭ್ಯರ್ಥಿಗಳು ಪದವಿ ಪ್ರಮಾಣ ಪತ್ರದ ಅರ್ಜಿಗಳನ್ನು ಅನ್‌ಲೈನ್ ಜಾಲತಾಣದ ಮೂಲಕವೇ **ದಿನಾಂಕ:17.02.2025** ರೊಳಗಾಗಿ ಸಲ್ಲಿಸತಕ್ಕದ್ದು.

*ಪು.ತಿ.ನೋ.*

3. UUCMS ಅಭ್ಯರ್ಥಿಗಳು **Student Login** ಆಗಿ **'Convocation'** ಮೆನುವಿನ ಮುಖಾಂತರ Payment Gateway ಸೌಲಭ್ಯವನ್ನು ಬಳಸಿಕೊಂಡು ಶುಲ್ಕವನ್ನು (Debit Card/Credit Card/Net Banking/Wallet ಇತ್ಯಾದಿ) ಹಣ ಪಾವತಿಸಬಹುದು.
4. 2018–19ನೇ ಸಾಲಿನಿಂದ ಮತ್ತು ನಂತರದ ವರ್ಷಗಳಲ್ಲಿ ಉತ್ತೀರ್ಣರಾಗಿರುವ ಎಲ್ಲಾ ಸ್ನಾತಕ/ಸ್ನಾತಕೋತ್ತರ NON-UUCMS ಅಭ್ಯರ್ಥಿಗಳು ಹಾಗು ಪಿಹೆಚ್.ಡಿ., ಅಭ್ಯರ್ಥಿಗಳಿಗೆ ಪದವಿ ಪ್ರಮಾಣ ಪತ್ರಗಳ ಅರ್ಜಿಗಳನ್ನು ಆನ್‌ಲೈನ್ ಮೂಲಕ ಶುಲ್ಕ ಪಾವತಿಸಿ ಅರ್ಜಿ ಸಲ್ಲಿಸತಕ್ಕದ್ದು. ಇದಕ್ಕಾಗಿ ವಿಶ್ವವಿದ್ಯಾನಿಲಯದ ವೆಬ್‌ಸೈಟ್ ವಿಳಾಸ www.davangereuniversity.ac.in ವಿದ್ಯಾರ್ಥಿಗಳು Examination ಮೆನುವಿಗೆ ಹೋಗಿ DU Portal ನಲ್ಲಿ Convocation Portal ನ ಮೂಲಕ ಅರ್ಜಿಯನ್ನು ಭರ್ತಿ ಮಾಡುವುದು. ಈ ಅರ್ಜಿಯನ್ನು Upload ಮಾಡುವ ಬಗ್ಗೆ ಸೂಚನಾ ವಿವರಗಳನ್ನು ಸದರಿ ವೆಬ್‌ಸೈಟ್‌ನ ಲಿಂಕ್‌ನಲ್ಲಿಯೇ ನೀಡಲಾಗಿದೆ. ಶುಲ್ಕವನ್ನು ATM Debit Card/Credit Card/Internet Banking ನಲ್ಲಿ ನೇರವಾಗಿ ಪಾವತಿಸಬಹುದಾಗಿದೆ.
5. 2010–11 ರಿಂದ 2017–18 ನೇ ಸಾಲಿನವರೆಗೆ ಉತ್ತೀರ್ಣರಾಗಿರುವ ಎಲ್ಲಾ ಸ್ನಾತಕ/ಸ್ನಾತಕೋತ್ತರ ಅಭ್ಯರ್ಥಿಗಳು ಆಫ್‌ಲೈನ್ (Offline) ಮುಖಾಂತರ ವಿಶ್ವವಿದ್ಯಾನಿಲಯ/ಸಂಬಂಧಿಸಿದ ಕಾಲೇಜುಗಳಲ್ಲಿ ಘಟಿಕೋತ್ಸವ ಅರ್ಜಿ ಪಡೆದು, ವಿಶ್ವವಿದ್ಯಾನಿಲಯ ನಿಗಧಿಪಡಿಸಿದ ಶುಲ್ಕ ಪಾವತಿಸಿ ಅಗತ್ಯ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸತಕ್ಕದ್ದು.
6. **ಈ ಹಿಂದಿನ ವರ್ಷಗಳಲ್ಲಿ ತೇರ್ಗಡೆಯಾಗಿ ಪದವಿ ಪ್ರಮಾಣ ಪತ್ರವನ್ನು ಪಡೆಯದವರು ಪ್ರಸ್ತುತ ಸಾಲಿನಲ್ಲಿ ನಿಗದಿಪಡಿಸಿದ ಶುಲ್ಕದೊಂದಿಗೆ ದಂಡ ಶುಲ್ಕ ರೂ.1200/- ಪಾವತಿಸಬೇಕು ಹಾಗೂ ಪ್ರತಿ ವರ್ಷಕ್ಕೆ ರೂ.120/- ರಂತೆ ಶೋಧನಾ ಶುಲ್ಕ ಪಾವತಿಸಬೇಕಾಗುತ್ತದೆ.**
7. ಒಮ್ಮೆ ಪಾವತಿಸಿದ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ ಮತ್ತು ಮುಂದಿನ ಘಟಿಕೋತ್ಸವಕ್ಕೆ ಹೊಂದಾಣಿಕೆ ಮಾಡಿಕೊಳ್ಳಲು ಅವಕಾಶಗಳಿರುವುದಿಲ್ಲ.
8. **ವಿದ್ಯಾರ್ಥಿಗಳು ಆನ್‌ಲೈನ್‌ನಲ್ಲಿ ಘಟಿಕೋತ್ಸವ ಅರ್ಜಿ ಸಲ್ಲಿಸುವಾಗ ಕನ್ನಡದಲ್ಲಿ ಹೆಸರು ಸರಿಯಾಗಿ ಪರಿಶೀಲಿಸಿ ನಮೂದಿಸಬೇಕು. ಇಲ್ಲದಿದ್ದಲ್ಲಿ ತಿದ್ದುಪಡಿಗೆ ನಿಯಾಮಾನುಸಾರ ದಂಡಶುಲ್ಕವನ್ನು ವಿಧಿಸಲಾಗುವುದು.**
9. ಪ್ರಥಮ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳ ಅಂಚೆ ವಿಳಾಸ, ಮೊಬೈಲ್ ನಂಬರ್ ಇತ್ಯಾದಿ ವಿವರವನ್ನು ದಿನಾಂಕ:03–02–2025ರೊಳಗಾಗಿ ಸಂಬಂಧಪಟ್ಟ ಕಾಲೇಜಿನವರು ತುರ್ತಾಗಿ ವಿಶ್ವವಿದ್ಯಾನಿಲಯದ ಪರೀಕ್ಷಾಂಗ ವಿಭಾಗದ *E-Mail ID: convocation@davangereuniversity.ac.in* ಸಾಫ್ಟ್ ಪ್ರತಿಯನ್ನು ಸಲ್ಲಿಸುವುದು ಹಾಗು ಹಾರ್ಡ್ ಪ್ರತಿಯನ್ನು ಅಂಚೆ ಮೂಲಕ/ಖುದ್ದಾಗಿ ಕಛೇರಿಗೆ ಸಲ್ಲಿಸಲು ಸೂಚಿಸಲಾಗಿದೆ.
10. ವಿದ್ಯಾರ್ಥಿಗಳು ತಮ್ಮ ಅಂಕಪಟ್ಟಿಯಲ್ಲಿ NCL ಎಂದು ನಮೂದಾಗಿದ್ದಲ್ಲಿ ಅಂತಹ ವಿದ್ಯಾರ್ಥಿಗಳು NCL ರದ್ದುಪಡಿಸಿಕೊಂಡ ನಂತರ ದಿನಾಂಕ:17.02.2025 ರೊಳಗಾಗಿ ಘಟಿಕೋತ್ಸವ ಪ್ರಮಾಣ ಪತ್ರಕ್ಕೆ ಅರ್ಜಿ ಸಲ್ಲಿಸತಕ್ಕದ್ದು. ಕೊನೆಯ ದಿನಾಂಕದ ನಂತರ ಬರುವ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ.

ಸೂಚನೆ: ಅಂತಿಮ ಸೆಮಿಸ್ಟರ್ ಅಂಕಪಟ್ಟಿಯಲ್ಲಿ ವಿದ್ಯಾರ್ಥಿ ಹೆಸರುಗಳಲ್ಲಿ ಏನಾದರೂ ತಿದ್ದುಪಡಿ ಮಾಡುವುದಿದ್ದರೆ ಘಟಿಕೋತ್ಸವದ ಅರ್ಜಿ ಸಲ್ಲಿಸುವುದಕ್ಕಿಂತ ಪೂರ್ವದಲ್ಲಿ ಸರಿ ಮಾಡಿಕೊಳ್ಳಬೇಕು.

| ಸಂಪರ್ಕಿಸಬೇಕಾದ ವಿಳಾಸ: | ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: |
|---|---|
| ಕುಲಸಚಿವ (ಪರೀಕ್ಷಾಂಗ)ರವರ ಕಾರ್ಯಾಲಯ<br>ದಾವಣಗೆರೆ ವಿಶ್ವವಿದ್ಯಾನಿಲಯ,<br>ಶಿವಗಂಗೋತ್ರಿ, ದಾವಣಗೆರೆ – 577 007.<br>ಕರ್ನಾಟಕ | **+91 6363463991**<br><br>**E-mail ID:**<br>**convocation@davangereuniversity.ac.in** |

ಆದೇಶದ ಮೇರೆಗೆ,

ಕುಲಸಚಿವರು (ಪರೀಕ್ಷಾಂಗ)
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ - 577 007

ಗೆ,

**ಪ್ರಕಟಣಾ ಫಲಕದಲ್ಲಿ ಪ್ರಕಟಿಸಲು ಕೋರಿದೆ.**

1. ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಯ ದಾವಣಗೆರೆ ಹಾಗೂ ಚಿತ್ರದುರ್ಗ ಜಿಲ್ಲೆಗಳಲ್ಲಿ ಬರುವ ಪ್ರಥಮ ದರ್ಜೆ /ಸಂಯೋಜಿತ ಹಾಗೂ ವೃತ್ತಿಪರ ಕಾಲೇಜುಗಳು
2. ಅಧ್ಯಕ್ಷರು/ಸಂಯೋಜನಾಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯದ ಎಲ್ಲಾ ಸಾತಕೋತ್ತರ ಅಧ್ಯಯನ ವಿಭಾಗ ಮತ್ತು ಸಂಶೋಧನಾ ವಿಭಾಗಗಳು, ಶಿವಗಂಗೋತ್ರಿ / ಚಿತ್ರದುರ್ಗ

*ಪು.ತಿ.ನೋ.*

ಪ್ರತಿಗಳು:

1. ಆಪ್ತ ಸಹಾಯಕರು-ಕುಲಪತಿಗಳು/ಕುಲಸಚಿವರು/ಕುಲಸಚಿವ(ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ, ದಾವಣಗೆರೆ.
2. ದಾವಣಗೆರೆ ವಿಶ್ವವಿದ್ಯಾನಿಲಯದ ಸಿಂಡಿಕೇಟ್, ವಿದ್ಯಾವಿಷಯಕ ಪರಿಷತ್, ಹಣಕಾಸು ಸಮಿತಿ ಸದಸ್ಯರುಗಳು ಮತ್ತು ವಿವಿಧ ನಿಕಾಯಗಳ ಡೀನರುಗಳು.
3. ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ, ದಾವಣಗೆರೆ.
4. ಕಾರ್ಯಪಾಲಕ ಅಭಿಯಂತರರು, ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ, ದಾವಣಗೆರೆ.
5. ಗ್ರಂಥಪಾಲಕರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
6. ನಿರ್ದೇಶಕರು, ಯೋಜನೆ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ, ಕಾಲೇಜು ಅಭಿವೃದ್ಧಿ ಪರಿಷತ್/ ದೈಹಿಕ ಶಿಕ್ಷಣ/ ಪ್ರಸಾರಂಗ, ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ, ದಾವಣಗೆರೆ.
7. ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಗುಡ್ಡದ ರಂಗವ್ವನಹಳ್ಳಿ, ಚಿತ್ರದುರ್ಗ.
8. ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರು/ಅಧೀಕ್ಷಕರು, ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ, ದಾವಣಗೆರೆ.
9. ಕುಲಸಚಿವರ (ಮೌಲ್ಯಮಾಪನ) ಮೈಸೂರು ವಿ.ವಿ./ಬೆಂಗಳೂರು ವಿ.ವಿ/ಮಂಗಳೂರು ವಿ.ವಿ/ಕರ್ನಾಟಕ ವಿ.ವಿ/ ಗುಲ್ಬರ್ಗಾ ವಿ.ವಿ./ಕುವೆಂಪು ವಿ.ವಿ/ ರಾಣಿ ಚೆನ್ನಮ್ಮ ವಿ.ವಿ./ಬೆಳಗಾಂ ವಿ.ವಿ./ ತುಮಕೂರು ವಿ.ವಿ./ ಕರ್ನಾಟಕ ರಾಜ್ಯ ಮಹಿಳಾ ವಿ.ವಿ. ವಿಜಯಪುರ /ವಿಜಯನಗರ ಶ್ರೀಕೃಷ್ಣ ದೇವರಾಯ ವಿ.ವಿ. ಬಳ್ಳಾರಿ.
10. ಪ್ರಾಚಾರ್ಯರು, ವಿಶ್ವವಿದ್ಯಾನಿಲಯ ದೃಶ್ಯಕಲಾ ಕಾಲೇಜು, ವಿದ್ಯಾನಗರ ರಸ್ತೆ, ದಾವಣಗೆರೆ.
11. ಶಿಕ್ಷಕ ಸಲಹೆಗಾರರು, ದಾವಣಗೆರೆ ವಿಶ್ವವಿದ್ಯಾನಿಲಯದ ಎಲ್ಲಾ ವಸತಿ ನಿಲಯಗಳು, ದಾವಣಗೆರೆ/ಚಿತ್ರದುರ್ಗ
12. ಉಪ ನಿರ್ದೇಶಕರು ವಾರ್ತಾ ಮತ್ತು ಪ್ರಚಾರ ಇಲಾಖೆ, ವಾರ್ತಾ ಭವನ, ದೇವರಾಜ ಅರಸು ಬಡಾವಣೆ, ದಾವಣಗೆರೆ-577 001. ಎಲ್ಲಾ ದಿನ ಪತ್ರಿಕೆಗಳಲ್ಲಿ-ಇವರಿಗೆ ಮಾಹಿತಿಗಾಗಿ ಹಾಗೂ ಸುದ್ದಿ ರೂಪದಲ್ಲಿ ಉಚಿತವಾಗಿ ಭಿತ್ತರಿಸಲು ಕೋರಿದೆ.
13. ನಿರ್ದೇಶಕರು, ದೂರದರ್ಶನ ಕೇಂದ್ರ, ಜೆ.ಸಿ. ನಗರ ಬೆಂಗಳೂರು-560006 ಇವರಿಗೆ-ಮಾಹಿತಿಗಾಗಿ ಹಾಗೂ ಸುದ್ದಿ ರೂಪದಲ್ಲಿ ಉಚಿತವಾಗಿ ಭಿತ್ತರಿಸಲು ಕೋರಿದೆ.
14. ಸುದ್ದಿ ಸಂಪಾದಕರು, ಆಕಾಶವಾಣಿ ಕೇಂದ್ರ, ಪೇಪರ್ ಟೌನ್ ಭದ್ರಾವತಿ ಇವರಿಗೆ-ಮಾಹಿತಿಗಾಗಿ ಹಾಗೂ ಸುದ್ದಿ ರೂಪದಲ್ಲಿ ಉಚಿತವಾಗಿ ಭಿತ್ತರಿಸಲು ಕೋರಿದೆ.
15. ಸಹಾಯಕ ನಿರ್ದೇಶಕರು, ಮಾರ್ಕೆಟಿಂಗ್ ಸಂವಹನ ಮತ್ತು ಜಾಹೀರಾತು ಸೀಮಿತ (ಎಂ.ಸಿ.ಎ) (ಕರ್ನಾಟಕ ಸರ್ಕಾರದ ಒಂದು ಉದ್ಯಮ), # 38 ಎ, 2ನೇ ಮಹಡಿ, ಜಿಲ್ಲಾ ಆಡಳಿತ ಭವನ, ಕರೂರು ರಸ್ತೆ, ದಾವಣಗೆರೆ -577 002. ಕರ್ನಾಟಕ ರಾಜ್ಯ ಪತ್ರದ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವ ಸಲುವಾಗಿ ಕಳುಹಿಸಿದೆ.
16. ವಿಶ್ವವಿದ್ಯಾನಿಲಯದ ಜಾಲತಾಣದ ಮುಖ್ಯಸ್ಥರು- ದಾವಣಗೆರೆ ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ವಿದ್ಯಾರ್ಥಿಗಳ ಹಾಗೂ ಸಾರ್ವಜನಿಕರ ಮಾಹಿತಿಗಾಗಿ ಈ ಅಧಿಸೂಚನೆಯನ್ನು ಭಿತ್ತರಿಸಲು ಕೋರಿದೆ.
17. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್, ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ, ದಾವಣಗೆರೆ.
18. ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ, ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ, ದಾವಣಗೆರೆ.
19. ಸಾರ್ವಜನಿಕ ಸಂಪರ್ಕಾಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ (ರಾಜ್ಯವ್ಯಾಪ್ತಿ ವೃತ್ತ ಪತ್ರಿಕೆಗಳಲ್ಲಿ ಸುದ್ದಿ ಪ್ರಕಟಿಸಲು ಕ್ರಮ ಕೈಗೊಳ್ಳುವುದು)
20. ಕಛೇರಿ ಪ್ರತಿ.